ಸಿಸಿ ನಂಃ 1779/2024

ಸಿ.ಡಬ್ಲೂ – 6

ಪಿ.ಡಬ್ಲೂ –5

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ |
| ತಂದೆಯ ಹೆಸರು | : | ರಾಮಚಂದ್ರ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಪಶು ವೈದ್ಯಕೀಯ ಪರೀಕ್ಷಕರು |
| ವಾಸ ಸ್ಥಳ | : | ನವನಗರ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :03-02-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ದಿಃ 29-03-2024 ರಂದು ನಾನು, ಆರೋಪಿ, ಮೃತ ಮತ್ತು ಕ್ಷಿರಾನಂದ ವಾಲಿ ಚಾಸಾ-7 ದಾಂಡೇಲಿಗೆ ಟಾಟಾ ಸಫಾರಿ ಕಾರಿನಲ್ಲಿ ಹೋಗಿದ್ದೆವು. ಸದರಿ ಕಾರ ನಂಬರ ನನಗೆ ಗೊತ್ತಿಲ್ಲ ಅದು ಬೂದು ಬಣ್ಣದ ಕಾರ ಆಗಿತ್ತು. ಕಾರನ್ನು ಆರೋಪಿ ಓಡಿಸುತ್ತಿದ್ದರು. ನಾವು ದಾಂಡೇಲಿಯಿಂದ ವಾಪಸ್ಸ ಬರುತ್ತಿದ್ದಾಗ ಹಳಿಯಾಳ ದಾಟಿ 8-10 ಕಿ. ಮೀ ಆದ ಮೇಲೆ ರಾತ್ರಿ 8.30 ಕ್ಕೆ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ಆಟೋ ಬಂದಿದೆ ಎಂದು ಸೈಡಿಗೆ ತೆಗೆದುಕೊಂಡಾಗ ಅಪಘಾತವಾಗಿರುತ್ತದೆ ಅಪಘಾತದಲ್ಲಿ ನನ್ನ ಎದೆಗೆ ಬೆನ್ನಿಗೆ ಮೊಣಕೈಗೆ ಪೆಟ್ಟಾಗಿದೆ. ಚಾಸಾ-7 ರವರ ಕುತ್ತಿಗೆಗೆ ಪೆಟ್ಟಾಗಿರುತ್ತದೆ ಹಾಗೂ ವಾಲಿಯವರು ಮೃತ

ಸಿಸಿ ನಂಃ 1779/2024

ಸಿ.ಡಬ್ಲೂ – 6

ಪಿ.ಡಬ್ಲೂ –5

ಹೊಂದಿರುತ್ತಾರೆ. ಆರೋಪಿಗೂ ಸಹ ಗಾಯವಾಗಿರುತ್ತದೆ. ನಂತರ ಆ್ಯಂಬುಲೇನ್ಸ ನಮ್ಮನ್ನು ಸಿವಿಲ್ ಆಸ್ಪತ್ರೆ ಗೆ ಕರೆದುಎಕೊಡ ಬಂದಿರುತ್ತಾರೆ ಅಲ್ಲಿಂದ ಎಸ್ ಡಿ ಎಮ ಆಸ್ಪತ್ರೆ ಕರೆದುಕೊಡು ಬಂದಿರುತ್ತಾರೆ ಅಲ್ಲಿ ನಾನು 5 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಅಪಘಾತ ಹೇಗೆ ಆಯಿತು ಮತ್ತು ಯಾರಿಂದ ಆಯಿತು ನನಗೆ ಗೊತ್ತಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಆ ದಿನ ಆರೋಪಿ ವೇಗವಾಗಿ ಕಾರನ್ನು ಚಲಾಯಿಸಿ ಅಪಘಾತಪಡಿಸಿದ್ದಾನೆ ಎಂದರೆ ಸಾಕ್ಷಿಯು ಆ ದಿನ ವಾಹನ ನಿಧಾನವಾಗಿ ಹೋಗುತ್ತಿತ್ತು ಎಂದು ಹೇಳುತ್ತಾರೆ. ವಾಹನ ನಂ. ಕೆಎ.02/ಎಮ್-0098 ಎಂದರೆ ನನಗೆ ಗೊತ್ತಿಲ್ಲ. ಮೇಲೆ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು. ನಿಪಿ.7 ರಂತೆ ಹೇಳಿಕೆ ಕೊಟ್ಟಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ನಂಃ 1779/2024

ಸಿ.ಡಬ್ಲೂ – 6

ಪಿ.ಡಬ್ಲೂ –5

**ಪಾಟೀಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,

ಧಾರವಾಡ.